ಒ.ಎಸ್.ನಂ:5/2013
ಪಿ.ಡಬ್ಲೂ.3

**ದಿ:07.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಪ್ರತಿವಾದಿ **4** ರಿಂದ **7** ಪರ ಶ್ರೀ**. B.S.,**ವಕೀಲರಿಂದ:-

ನಾನು ಬಿ.ಎ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಎಲ್ಲಾ ಆಸ್ತಿಗಳ ಬಗ್ಗೆ ಮಾಹಿತಿ ಇರುವುದಿಲ್ಲ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ತಿಳಿಸಿರುವ ಹಾಗೆ ಯಾವ ವರ್ಷದಂದು ವಾದಿ ಮತ್ತು ಪ್ರತಿವಾದಿಗಳ ನಡುವೆ ಮೌಖಿಕವಾಗಿ ವಿಭಾಗ ಆದ ಬಗ್ಗೆ ನನಗೆ ಗೋತ್ತಿರುವುದಿಲ್ಲ . ನಾನು ಸದರಿ ವಾದಿಯ ತಂದೆ ಬಸಪ್ಪ ರವರ ಅಣ್ಣ ತಮ್ಮಂದಿರು ಒಟ್ಟು 3 ಜನ ಇರುತ್ತಾರೆ . ಅವರ ಹೆಸರರುಗಳು ಬಸಪ್ಪ , ನಾಗಲಿಂಗಪ್ಪ ಚನ್ನಬಸಪ್ಪ ಇರುತ್ತದೆ . ಅವರ ತಂದೆ ಹೆಸರು ದೊಡ್ಡಜ್ಜ ಇರುತ್ತದೆ . ನನಗೆ ವಾದಿ ಮತ್ತು ಪ್ರತಿವಾದಿಗು ಜಮೀನುಗಳ ಬಗ್ಗೆ ಯಾರು ಉಳುವೆ ಮಾಡುತ್ತಾರೆ ಎಂದು ಮಾಹಿತಿ ಇರುತ್ತದೆ . ನನಗೆ ದೊಡ್ಡಜ್ಜ ಅವರಿಗೆ ಸೇರಿದ ಎಷ್ಟು ಆಸ್ತಿ ಇರುತ್ತದೆ ಗೊತ್ತಿರುವುದಿಲ್ಲ . ನನಗ ವಾದಿ ಮತ್ತು ಪ್ರತಿವಾದಿಗಳಿಗೆ ಅಂದಾಜು ಎಷ್ಟು ಆಸ್ತಿ ಪಾಲುವಿಭಾಗ ಆದ ಬಗ್ಗೆ ಮಾಹಿತಿ ಇರುವುದಿಲ್ಲ . ದೊಡ್ಡಪ್ಪ ಯಾನೆ ದೊಡ್ಡಜ್ಜ ಅವರ ಹೆಸರಿಗೆ ಇದ್ದ ಆಸ್ತಿಗಳು ಅವರು ಮಕ್ಕಳ ನಡುವೆ ದಾವಾ ಆಸ್ತಿ ಸೇರಿ ಪಾಲುವಿಭಾಗ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮೂಲ ಎಷ್ಟು ವಿಸ್ತೀರ್ಣ ಇತ್ತು ನನಗೆ ಗೊತ್ತಿಲ್ಲ . ದಾವಾ ಆಸ್ತಿಯನ್ನು ವಾದಿ ಮತ್ತು ಪ್ರತಿವಾದಿಗಳು ತಲಾ 7 ½ ಗುಂಟೆ ಪಾಲುವಿಭಾಗ ಮಾಡಿಕೊಂಡಿರುತ್ತಾರೆ . ಈ ಬಗ್ಗೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ . ನನಗೆ ಸದರಿ ವಿಭಾಗ ಯಾವ ವರ್ಷ ಯಾವ ತಾರೀಖು ನಡೆದ ಬಗ್ಗೆ ಗೋತ್ತಿರುವುದಿಲ್ಲ . ದಾವಾ ಆಸ್ತಿ ಸರ್ವೆ ನಂಬರ್ 1/6 ಇರುತ್ತದೆ . ಸದರಿ ದಾವಾ ಆಸ್ತಿ ಸರ್ವೆ ನಂಬರ್ 1/6 ರ ಪೋಡು ಆದ ಪೂರ್ವದಲ್ಲಿ ಎಷ್ಟು ವಿಸ್ತೀರ್ಣ ಗೋತ್ತಿರುವುದಿಲ್ಲ . ವಾದಿ ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಆದ ಜಮೀನುಗಳಲ್ಲಿ ಅವರವರ ಪಾಲಿಗೆ ಬಂದ ಆಸ್ತಿಗಳಲ್ಲಿ ಸ್ವಾಧೀನ ಅನುಭವ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಅಕ್ಕಪಕ್ಕದಲ್ಲಿ ನನಗೆ ಸಂಬಂದಿಸಿ ಮನೆ ಅಥವಾ ಜಮೀನು ಇರುವುದಿಲ್ಲ . ನನಗೆ ವಾದಿ 3 ರವರು ಕುಟುಬಂದ ಬಗ್ಗೆ ಮಾಹಿತಿ ಇರುತ್ತದೆ . ನಾನು ವಾದಿ 3 ರವರ ಜಮೀನನ್ನು ನೋಡಿಕೊಳ್ಳುತ್ತಿರುವುದಿಲ್ಲ .

ವಾದಿ 3 ರವರು ಒಬ್ಬ ಮಗ ಅಮೇರಿಕಾ ದೇಶದಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ಮತ್ತೊಬ್ಬ ಮಗ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ವಾದಿ 3 ರವರು ಬೇರೆ ಕಡೆ ಹೋದಾಗ ಅವರ ಜಮೀನನ್ನು ನಾನು ನೋಡಿಕೊಳ್ಳುತ್ತಿದ್ದೇ ಎಂದರೆ ಸರಿಯಲ್ಲ. ವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ . ಪ್ರತಿವಾದಿ 7 ರವರು ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ಕಾಂಪೌಂಡ್ ಹಾಕಿ ತಿಪ್ಪೇ ಮತ್ತು ಇತರೆ ಸಾಮಾನುಗಳನ್ನು ಹಾಕಿಕೊಂಡು ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿ ದಾವಾ ಆಸ್ತಿಯನ್ನು ಮೂರು ಭಾಗ ಮಾಡಿರುತ್ತಾರೆ ಪ್ರತಿವಾದಿ 7 ರವರಿಗೆ ಬಂದ ಪಾಲಿನ ಆಸ್ತಿಯಲ್ಲಿ ಮಾತ್ರ ಮನೆ ಕಟ್ಟಿಕೊಂಡು ತಿಪ್ಪೇ ಹಾಕಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ನಾನೇ ಹೇಳಿ ಬರೆಸಿರುತ್ತೇನೆ . ನನಗೆ ವಾದಿ ಮತ್ತು ಪ್ರತಿವಾದಿಗಳ ತಂದೆಯರ ನಡುವೆ ವಿಭಾಗ ಆದ ಬಗ್ಗೆ ಯಾವುದೇ ಮಾಹಿತಿ ಗೊತ್ತಿರುವುದಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ನಡುವೆ ಪಾಲುವಿಭಾಗ ಆಗಿ ಎಷ್ಟು ವಿಸ್ತೀರ್ಣ ವಿಂಗಡಣೆ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನನ್ನನ್ನು ನ್ಯಾಯಾಲಯದಲ್ಲಿ ಸಾಕ್ಷಿ ಮಾಡಲು ವಾದಿ 3 ರವರು ಕರೆದಿರುತ್ತಾರೆ . ವಾದಿ 3 ರವರು ಹೇಳಿ ಕೊಟ್ಟ ಹಾಗೆ ನಾನು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಾದಿ 3 ರವರು ಹೇಳಿಕೊಟ್ಟ ಹಾಗೆ ನಾನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಇರುವ ಮಾಹಿತಿ ಬಗ್ಗೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ ಎಂದರೆ ಸರಿ. ನನಗೆ ದಾವಾ ಆಸ್ತಿ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪ್ರತಿವಾದಿ 7 ರವರ ತಂದೆಯ ಹೆಸರಿಗೆ ಪಾಲು ಬಂದಿದ್ದು ಅದರಂತೆ ಅವರೇ ಸ್ವಾಧೀನ ಅನುಭವ ಇರುತ್ತಾರೆ ಎಂದರೆ ಸರಿಯಲ್ಲ. ವಾದಗಳು ಎಂದಿಗೂ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

**Sd/-**

ಸಿವಿಲ್ ನ್ಯಾಯಾಧೀಶರು, ಜಗಳೂರು